# ದೀಪಿಕಾಗೆ ಬೇಜಾರು!



ದೀಪಿಕಾ ಪಡುಕೋಣೆಯ ಫ್ರೆಂಡ್‌ಶಿಪ್ ಗಳಿಸೋದಕ್ಕೆ ಬಾಲಿವುಡ್ ಹುಡುಗರೆಲ್ಲ ಸಾಲುಗಟ್ಟಿ ನಿಂತಿರುವಾಗ 'ಯು.ಬಿ ಯುವರಾಜ' ಸಿದ್ಧಾರ್ಥ ಮಲ್ಯ ಆಕೆಯ ಸ್ನೇಹ ಗಳಿಸಿಕೊಂಡದ್ದು, ಆಕೆಯ ಜತೆಗೆ ಸದಾ ಸುತ್ತುವುದು ದೊಡ್ಡ ಸುದ್ದಿಯೇ. ಆದರೆ ಈ ಯುವರಾಜನಿಗೆ ಹೆಣ್ಣಿನ ಮನಸ್ಸನ್ನು ಗೆಲ್ಲುವ ಸುಲಭ ಉಪಾಯಗಳ್ಯಾವುವೂ ಗೊತ್ತಿಲ್ಲವೆ... ಎಂದು ದೀಪಿಕಾ ಅಭಿಮಾನಿಗಳಿಗೆ ಸಖತ್ ಖುಷಿಯಂತೆ.

ವಿಷಯ ಏನಪ್ಪಾಂತಂದ್ರೆ... ಮೊನ್ನೆ ಮುಂಬೈಯಲ್ಲಿ ರಾಹುಲ್ ಬೋಸ್ ಹಳೆಯ ಬೆಲೆ ಬಾಳುವ ವಸ್ತುಗಳ ಹರಾಜು ಕೂಗಿದ. ಆ ಹರಾಜಿನಲ್ಲಿ ಬಾಲಿವುಡ್‌ನ ಹಲವು ಘಟಾನುಘಟಿಗಳಿದ್ದರಂತೆ. ಅದರಲ್ಲಿ ದೀಪಿಕಾ ಮತ್ತು ಸಿದ್ದಾರ್ಥ ಮಲ್ಯ ಕೂಡಾ ಸೇರಿದ್ದರಂತೆ. ಅವತ್ತು ಹರಾಜು ಕೂಗುವಾಗ ಆಕಸ್ಮಿಕವಾಗಿ ದೀಪಿಕಾಳ ಅಪ್ಪ, ವಿಶ್ವಖ್ಯಾತಿಯ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರಿಗೆ ಸೇರಿದ ಕೆಲವು ವಸ್ತುಗಳೂ ಇದ್ದವಂತೆ. ಬೇರೆ ಯಾರೇ ಆಗಿದ್ದರೂ ಉತ್ಸಾಹದಿಂದ ಮುಂದೆ ಬಂದು, ಎಷ್ಟೇ ಹಣವಾದರೂ ಹರಾಜು ಕೂಗಿ ಆ ವಸ್ತುಗಳನ್ನು ಪಡೆದು ಗೆಳತಿಗೆ ಕಾಣಿಕೆಯಾಗಿ ಕೊಡುತ್ತಿದ್ದರೇನೊ..! ಆದರೆ ಸಿದ್ದಾರ್ಥ ಸ್ವಲ್ಪವೂ ಮಿಸುಕಾಡಲಿಲ್ಲವಂತೆ. ಸುಮ್ಮನೆ ಹರಾಜು ನೋಡುತ್ತಿದ್ದನಂತೆ. ಕೊನೆಗೆ ಅದ್ಯಾರೋ ಅಪರಿಚಿತ ಆ ವಸ್ತುಗಳನ್ನು ಖರೀದಿಸಿ ಒಯ್ದನಂತೆ. 'ದಿಲ್‌ದಾರ್ ಅಪ್ಪನಿಗೆ ಜಗ್ಗ ಮಗ' ಎನ್ನಲಾಗದೇ ಪಾಪ, ದೀಪಿಕಾ (ಮೌನವಾಗಿ) ಶಾನೆ ಬೇಜಾರ್ ಮಾಡ್ಕೊಂಡಳಂತೆ!

## ಶಾರೂಕ್ ಟೆನ್ಶನ್



ಶಾರೂಕ್ ಖಾನ್ ಸಖತ್ ಟೆನ್ಶನ್ ಮಾಡ್ಕೊಂಡಿದ್ದಾನಂತೆ– ರಜನಿಕಾಂತ್‌ನ 'ಎಂದಿರನ್' ಚಿತ್ರ ನೋಡಿ!

ಎಲ್ಲರೂ ಎಂಜಾಯ್ ಮಾಡ್ತಿರಬೇಕಾದ್ರೆ, ಇವನ್ಯಾಕೆ ಟೆನ್ಶನ್ ಮಾಡ್ಕೊಂಡ.. ಅಂದ್ರಾ? ಅದಕ್ಕೊಂದು ಬಲವಾದ ಕಾರಣವಿದೆ. ಕಳೆದ ಒಂದು ವರ್ಷದಿಂದ ಶಾರೂಕ್ ತನ್ನ ಹೊಸ ಚಿತ್ರ 'ರಾ– ಒನ್' ಬಗ್ಗೆ ಹಗಲೂ ರಾತ್ರಿ ಚಿಂತಿಸಿದ್ದಾನೆ. ಇದೊಂದು ಸಯನ್ಸ್ ಫಿಕ್ಷನ್ ಚಿತ್ರವಾದ್ದರಿಂದ ಅದ್ದೂರಿಯಾಗಿ ತೆರೆಗೆ ತರಬೇಕೆಂದು ಒದ್ದಾಡಿದ್ದಾನೆ. ಚಿತ್ರಕಥೆಯನ್ನು ಇಪ್ಪತ್ತೆಂಟು ಸಲ ತಿದ್ದಿದ್ದಾನೆ. ಈಗ ಎಂದಿರನ್ ಸಿನಿಮಾ ನೋಡಿದ ಬಳಿಕ ಶಾರೂಕ್‌ಗೆ ತನ್ನ 'ರಾ–ಒನ್' ಕೇವಲ ಸ್ಯಾಂಪಲ್ ಅಂತನ್ನಿಸಿಬಿಟ್ಟಿದೆಯಂತೆ! ಅದಕ್ಕೆ ತಕ್ಕ ಹಾಗೆ ರಜನಿ ಅಭಿಮಾನಿಗಳು, ಸಿನಿಮಾ ವೆಬ್‌ಸೈಟ್‌ಗಳಲ್ಲಿ ಎರಡೂ ಚಿತ್ರಗಳ ರೈಲು ಹಳಿಯ ಮೇಲಿನ ಸಾಹಸದ ದೃಶ್ಯಗಳನ್ನು ಮರುಪ್ರದರ್ಶನಕ್ಕೆ ಇಟ್ಟಿದ್ದಾರೆ. ನೋಡಿದರೆ 'ಎಂದಿರನ್' ಚಿತ್ರದ ಥೇಟ್ ಸಾಹಸ ದೃಶ್ಯವೇ 'ರಾ–ಒನ್'ನಲ್ಲೂ ಕಾಣಿಸುತ್ತದೆ!

ಬಲ್ಲ ಮೂಲಗಳ ಪ್ರಕಾರ, ಶಾರೂಕ್ ತನ್ನ ಚಿತ್ರದಲ್ಲಿ ಆ್ಯಕ್ಷನ್ ಜತೆಗೆ ಇನ್ನೂ 3–4 ಮೆಲೊಡ್ರಾಮಾದ ದೃಶ್ಯಗಳನ್ನು ತುಂಬಿ ಚಿತ್ರಕಥೆಯನ್ನು ಇನ್ನಷ್ಟು ಬದಲಾಯಿಸಲಿದ್ದಾನಂತೆ!

## ಟೂ ಪೀಸ್ ಕಂಗನಾ

ಕಂಗನಾ ಗಟ್ಟಿ ಮನಸ್ಸು ಮಾಡಿದ್ದಾಳಂತೆ– ಬಿಚ್ಚೋದಕ್ಕೆ!

ಈವರೆಗೆ ಎಷ್ಟೆಲ್ಲಾ ಒಳ್ಳೆಯ ಚಿತ್ರಕಥೆಗಳನ್ನು ಆಯ್ದು, ಮೈತುಂಬಿ ನಟಿಸಿದರೂ ಬಾಲಿವುಡ್‌ನಲ್ಲಿ ಆರಕ್ಕೇರದ–ಮೂರಕ್ಕಿಳಿಯದ ಸ್ಥಿತಿ! ಹೃತಿಕ್ ರೋಶನ್ ಜತೆ 'ಕೈಟ್ಸ್'ನಲ್ಲಿ ಒಳ್ಳೆಯ ಪಾತ್ರ ಸಿಕ್ಕರೂ, ನಿರ್ದೇಶಕ ಕತ್ತರಿಯಾಡಿಸಿದ್ದರಿಂದ ಉಳಿದದ್ದೇ ಅಲ್ಪ ಅಭಿನಯ! ಪಾಪ, ಕಂಗನಾ ಆದರೂ ಏನು ಮಾಡಿಯಾಳು? ಅದಕ್ಕೇ ಈಗ ನಿರ್ಧಾರವೊಂದಕ್ಕೆ ಬಂದಿದ್ದಾಳೆ!

'ರ್‍ಯಾಸ್ಕಲ್ಸ್' ಎನ್ನುವುದು ಆಕೆಯ ಮುಂದಿನ ಚಿತ್ರ. ಸಂಜಯ್ ದತ್‌ನ ಈ ಮೊತ್ತ ಮೊದಲ 'ಹೋಮ್ ಪ್ರೊಡಕ್ಷನ್'ನಲ್ಲಿ ಕಂಗನಾಳ ಮೊದಲ ಸೀನೇ ಸ್ವಿಮಿಂಗ್ ಡ್ರೆಸ್ ಸೀನ್! ಅದೂ ಟೂ ಪೀಸ್! ಡೇವಿಡ್ ಧವನ್ ನಿರ್ದೇಶನದ ಈ ಚಿತ್ರದಲ್ಲಿ ಕಂಗನಾಳದ್ದು ಐಟಂ ಗರ್ಲ್ ಪಾತ್ರವಂತೆ! ಅಂದ ಹಾಗೆ, ಈ ದೃಶ್ಯದಲ್ಲಿ ಧರಿಸುವ ಟೂ ಪೀಸ್ ಸ್ವಿಮಿಂಗ್ ಡ್ರೆಸ್ ಹುಡುಕಿಕೊಂಡು ಸ್ವತಃ ಕಂಗನಾ ಲಂಡನ್ನಿಗೆ ಹೋಗಿದ್ದಳಂತೆ. ಅಲ್ಲಿ ಆಯ್ಕೆ ಮಾಡಿದ ಸ್ವಿಮಿಂಗ್ ಡ್ರೆಸ್ ಹಾಕಿದ ಮೊದಲ ದೃಶ್ಯ ಬ್ಯಾಂಕಾಕ್‌ನಲ್ಲಿ ಶೂಟ್ ಆಗುತ್ತಂತೆ! ಒಳ್ಳೆಯ ಪಾತ್ರ ಸಿಗದಿದ್ದರೂ ಪರವಾಗಿಲ್ಲ, ಒಳ್ಳೆಯ ಬಿಕಿನಿ ಸಿಕ್ಕಿತಲ್ಲ.. ಎಂದಳಂತೆ ಕಂಗನಾ. ಕಂಗನಾ ಜತೆ ಸಮುದ್ರದ ನೀರಿನಲ್ಲಿ ಬೀಳೊ ದೃಶ್ಯದಲ್ಲಿ ಅಜಯ್ ದೇವಗನ್ ಮತ್ತು ಸಂಜಯ್ ದತ್ ನಟಿಸಿದ್ದಾರಂತೆ!



■ ಬಿಂದು